

# ರಾಮನ್ "ಬದುಕಿನ" ನೆರಳು

ಬೆಂಗಳೂರು, ಸೆ. ೧೨- "ಸತ್ತಿಲ್ಲ ಇನ್ನೂ ಬದುಕಿದ್ದಾರೆ"

-ಖ್ಯಾತ ವಿಜ್ಞಾನಿ ಸರ್ ಸಿ. ವಿ. ರಾಮನ್‌ರ ಕುರಿತು ಪ್ರಥಮ ಬಾರಿಗೆ ಏರ್ಪಡಿಸಲಾಗಿರುವ ಚಿತ್ರ ಪ್ರದರ್ಶನ ವೀಕ್ಷಿಸಿದ ಜನತೆಯ ಹೃದಯ ಮನಸ್ಸುಗಳಲ್ಲಿ ಅಚ್ಚಳಿಯದೆ ಉಳಿಯುವ ಚಿತ್ರ ಇದು.

ತಿಂಗಳಿಗೆ ಹತ್ತು ರೂಪಾಯಿ ವೇತನ ಪಡೆಯುತ್ತಿದ್ದ ಶಿಕ್ಷಕರ ಪುತ್ರ, ಸಿ.ವಿ. ರಾಮನ್ ವಿಶ್ವಖ್ಯಾತ ವಿಜ್ಞಾನಿ ಆಗುವರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಅವರು ಕಂಡು ಹಿಡಿದ ರಾಮನ್ ಸಿದ್ಧಾಂತ ನೋಬೆಲ್ ಬಹುಮಾನ ಪಡೆಯಲು ಕಾರಣ ಆಯಿತು.

## ಕಿರಿಯ ವಿದ್ಯಾರ್ಥಿ

"ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದ ಈ ಬಾಲಕನನ್ನು ನೋಡಿ ಎಲ್ಲರಿಗೂ ಅಚ್ಚರಿ. ಕಾರಣ-ಈತ ಅತ್ಯಂತ ಕಿರಿಯ ವಿದ್ಯಾರ್ಥಿ. ಪ್ರಾಧ್ಯಾಪಕರಿಗೆ ಅನುಮಾನ. ಆದರೆ ಅನುಮಾನ ಬಗೆಹರಿದು ಪ್ರತಿಭೆ ಬೆಳಕಿಗೆ ಬಂದಾಗ "ನೀನು ಇಲ್ಲಿ ಬಂದು ನನ್ನ ಉಪನ್ಯಾಸ ಕೇಳುವ ಅಗತ್ಯ ಇಲ್ಲ" ಎಂದು ಪ್ರಾಧ್ಯಾಪಕರು ತೀರ್ಪು ನೀಡಿದರು"-ರಾಮನ್‌ರ ಪ್ರತಿಭೆಗೆ ಇದೊಂದು ನಿದರ್ಶನ.

(೨ನೇ ಪುಟದ ೬ನೇ ಕಾಲಂ ನೋಡಿ)

# ರಾಮನ್ 'ಬದುಕಿನ' ನೆರಳು

(ಒಂದನೇ ಪುಟದಿಂದ)

"ಮದ್ರಾಸದಿಂದ ಭಾರತ ತನ್ನದೇ ಆದ ಧ್ವಜವನ್ನು ಇಲ್ಲಿ ಹೊಂದಿಲ್ಲ"– ನೊಬೆಲ್ ಬಹುಮಾನ ಸಂದರ್ಭ ದಲ್ಲಿ ರಾಮನ್ ಬಹಿರಂಗವಾಗಿ ವ್ಯಕ್ತ ಪಡಿಸಿದ ದುಃಖ ಇದು.

## ಚರ್ಚಿನ ಧ್ವನಿ ಆಕರ್ಷಣೆ

"ಧ್ವನಿ"–ರಾಮನ್‌ರಿಗೆ ಅಂಟಿಕೊಂಡ ಹವ್ಯಾಸ. ವಿದೇಶಕ್ಕೆ ಹೋದಾಗ ಚರ್ಚ್‌ನಲ್ಲಿ ಬೆಳಗ್ಗೆ ಹಾಗೂ ಸಂಜೆ ಕೇಳಿಬರುತ್ತಿದ್ದ ಗಂಟೆಯ ಮೇಲೆ ಇವರಿಗೆ ಮೋಹ ಕುದುರಿತು. ಪತ್ನಿ ಲೋಕಸುಂದರಿ ಜತೆಯಲ್ಲಿ ತಪ್ಪದೆ ಬೆಳಿಗ್ಗೆ ಹಾಗೂ ಸಂಜೆ ಚರ್ಚಿಗೆ ಭೇಟಿ. ಆಗ ಅವರೊಂದಿಗೆ ಹೋಗಿದ್ದ ಬ್ರಾಹ್ಮಣ ಅಡಿಗೆಯವ "ಇವರು ಕ್ರಿಸ್ತ ಮತಕ್ಕೆ ಸೇರಿದ್ದಾರೆ." ಎಂಬ ತೀರ್ಮಾನಕ್ಕೆ ಬಂದ. "ಕ್ರಿಸ್ತರಿಗೆ ನಾನು ಅಡಿಗೆ ಮಾಡೋದಿಲ್ಲ" ಎಂದು ಆತ ಹೇಳದೆ ಕೇಳದೆ ಭಾರತಕ್ಕೆ ಓಡಿ ಬಂದು ರಾಮನ್‌ರ ತಂದೆಗೂ ಈ ವಿಚಾರ ತಿಳಿಸಿಬಿಟ್ಟ. ಆಗ ತಂದೆಯಿಂದ ಮಗನಿಗೆ ನೇರವಾಗಿ "ಬರೆದ ಪತ್ರ ಇಲ್ಲಿ ಪ್ರದರ್ಶಿತ.

ಸರ್ ರಾಮನ್ ಹುಟ್ಟಿದ ಊರು, ಮನೆ, ಅವರು ಬಳಸಿದ ವಸ್ತು. ಪತ್ರ ವ್ಯವಹಾರ, ಅವರು ಸಂಗ್ರಹಿಸಿದ ವಜ್ರ ಹಾಗೂ ಬಣ್ಣದ ಹರಳುಗಳು ಇಲ್ಲಿ ಪ್ರದರ್ಶಿಸಲಾಗಿದೆ.

ಮೇಕ್ರಿ ಸರ್ಕಲ್ ಬಳಿ ಇರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಇಂದಿನಿಂದ ಈ ಪ್ರದರ್ಶನ ಆರಂಭ ಸೆಪ್ಟಂಬರ್ ೧೫ರವರೆಗೆ ಮಧ್ಯಾಹ್ನ ೨.೩೦ ರಿಂದ ೬.೩೦ ಹಾಗು ಸೆ. ೧೬ ಹಾಗೂ ೧೭ ರಂದು ಬೆಳಿಗ್ಗೆ ೯.೩೦ ರಿಂದ ಸಂಜೆ ೫ರವರೆಗೆ ಪ್ರದರ್ಶನವನ್ನು ಸಾರ್ವಜನಿಕರು ವೀಕ್ಷಿಸಬಹುದು.